ಮೂಲ ದಾವಾ ನಂಃ 90/2017

ಪಿ ಡಬ್ಲುಃ 1.

ಸಾಕ್ಷಿಯನ್ನು ದಿನಾಂಕಃ **19-08-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ. ಕೆ ಎಸ್ ಬಿ., ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಷ್ ಓದಲು, ಬರೆಯಲು ಬರುವುದಿಲ್ಲ. ದಾವೆಯನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ಮಂಕಿ ಗ್ರಾಮದ ಸಾರಸ್ವತ್ ಕೇರಿ ಇಲ್ಲಿ ವಾಸ್ತವ್ಯ ಮಾಡಿ ಬಂದಿದ್ದೇನೆ. ಅಲ್ಲಿ ಜಾಗವೂ ಇದೆ. ಹಾಗೂ ದಾಸನಮಕ್ಕಿಯಲ್ಲಿ ಜಾಗವಿದೆ. ಸಾರಸ್ವತ್ ಕೇರಿಯಲ್ಲಿ ನನ್ನ ಅಜ್ಜ ಕಟ್ಟಿಸಿದ ಮನೆ ಇದೆ. ಅಲ್ಲೇ ವಾಸ್ತವ್ಯ ಮಾಡಿ ಬಂದಿದ್ದೇನೆ. ದಾಸನಮಕ್ಕಿಯಲ್ಲಿ

ಪಿ ಡಬ್ಲುಃ 1.

ಸ.ನಂ.78/2 ಅ ಅಲ್ಲಿ ಹಕ್ಕು ಇದೆ. ಸ.ನಂ.78/2 ಅ ಇದರಲ್ಲಿ ಒಡೆಯ ನಾತೆಯಿಂದ ಹಕ್ಕು ಇದೆ. ಒಕ್ಕಲು ಯಾರೂ ಇರಲಿಲ್ಲ. ಮರ್ತು ಗಣಪತಿ ನಾಯ್ಕು ಪ್ರತಿವಾದಿಯರ ತಂದೆ. ಮರ್ತು ಗಣಪತಿ ನಾಯ್ಕು 1948-49 ನೇ ಸಾಲಿನಿಂದ ರೈತರಾಗಿದ್ದರು. ನಾನು ದಾವಾ ಸ್ಥಳದ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ. ಪ್ರಥಮತಾಹ 2009 ರಲ್ಲಿ ನೋಡಿದ್ದೇನೆ. ಅದರ ಮುಂಚೆ 2000 ನೇ ಇಸ್ವಿಯ ಮುಂಚೆ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ. ಆ ಸಂದರ್ಭದಲ್ಲಿ ಮರ್ತು ಗಣಪತಿ ನಾಯ್ಕ ಅಂದರೆ ಪ್ರತಿವಾದಿಯರ ಅಜ್ಜನ ಹೆಸರು ಇತ್ತು. 1940 ರ ಪೂರ್ವದಲ್ಲಿ ಗ್ರಾಮ ರೆಕಾರ್ಡಿನಲ್ಲಿ ನನ್ನ ಅಜ್ಜ ಸುಬ್ರಾಯ ಬಾಲಯ್ಯು ನಾಯ್ಕ ಇವರ ಹೆಸರು ಇತ್ತು. ಆ ರೀತಿ ಯಾವ ಇಸ್ವಿಯ ವರೆಗೆ ಹೆಸರು ಇತ್ತು ಎಂದು ನಾನು ನೋಡಲು ಹೋಗಿಲ್ಲ. ದಾವಾ ದಾಖಲಿಸಬೇಕಿದ್ದರೆ ಅಜ್ಜ ಸುಬ್ರಾಯ ಬಾಲಯ್ಯು ನಾಯ್ಕ ಈತನ ಹೆಸರು ಎಲ್ಲಿಯವರೆಗೆ ಇತ್ತು ಎಂದು ನಾನೇನು ಚೌಕಾಸಿ ಮಾಡಿಲ್ಲ. 1948 ರಿಂದ ಮರ್ತು ಗಣಪತಿ ನಾಯ್ಕು ಇವರ ಹೆಸರು ರೈತ ನಾತೆಯಿಂದ ಗ್ರಾಮ ರೆಕಾರ್ಡಿನಲ್ಲಿ ನಮೂದಾಗಿತ್ತು ಎಂದರೆ ಸರಿ.

**(ಈ ಹಂತದಲ್ಲಿ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**